‘ಅಯ್ಯೋ, ಅಕ್ಕಿ ಏನಗಿದೆ ನೋಡಿದ್ಯಾ?’ ಎಂಬ ಅವಳ ಕಳವಳದ ಪ್ರಶ್ನೆಗೆ ಅವನು ಶಾಂತವಾಗಿ ‘ಅದೇನೂ ಆಗಿಲ್ಲ, ನೀನು ಮುಖ ತೊಳೆದು ಬಾ, ನಾ ಅಡುಗೆ ಮನೆಲಿರ್ತೀನಿ’ ಎಂದು ಹೇಳಿ ಅವಳ ಹಣೆಗಿನ್ನೊಂದು ಮುತ್ತಿಟ್ಟು ಎದ್ದು ಹೋದ. ಕಾಫಿ ಮುಗಿಸಿ ಸರಸರನೆ ಎದ್ದು ಹಾಸಿಗೆ ಒಪ್ಪ ಮಾಡಿ ನಿತ್ಯಕಾರ್ಯಗಳನ್ನು ಮುಗಿಸಿ ಅವಳು ಅಡುಗೆ ಮನೆಗೆ ಅಡಿಯಿಡುವ ಹೊತ್ತಿಗೆ ಅವನಾಗಲೇ ಹಿಟ್ಟು ರುಬ್ಬಿಕೊಳ್ಳುವ ಕಾರ್ಯಕ್ಕೆ ಸಿದ್ಧನಾಗುತ್ತಿದ್ದ.

ಒಳಗೆ ಬಂದವಳೇ, ನೀಳ ಕರಿಕಲ್ಲಿನ ಅಡುಗೆ ಮನೆ ಕಟ್ಟೆಯ ಮೇಲೆ ಏರಿ ಕುಳಿತವಳು, ತನ್ನ ಇಳಿಬಿದ್ದ ನೀಳ ಕಾಲುಗಳನ್ನು ಆಡಿಸುತ್ತಾ, ನೆನೆಹಾಕಿದ್ದ ಅಕ್ಕಿಯ ನುಚ್ಚನ್ನು ಬೆರಳಲ್ಲಿ ಕೆದಕುತ್ತಾ, ಆಗೊಂದು ಈಗೊಂದು ಕಾಳು ಬಾಯಿಗೆ ಸೇರಿಸುತ್ತ ಅವನನ್ನೇ ಗಮನಿಸುತ್ತಿದ್ದಳು. ನಳಪಾಕದ ಅಸ್ತಿತ್ವ ತನ್ನಿಂದಲೇ ಆಗಿದ್ದು ಎನ್ನುವಂತೆ ಪೊಳ್ಳು ಪೋಸು ಕೊಡುತ್ತಾ ಅವನೂ ತಯಾರಿ ನಡೆಸಿದ್ದ. ಅವಶ್ಯಕತೆಗಿಂತ ಹೆಚ್ಚೇ ಪಾತ್ರೆಗಳು ಅಡುಗೆಕಟ್ಟೆಯ ಮೇಲೆ ರಾರಾಜಿಸುತ್ತಿದ್ದವು. ಎರಡೇ ಪಾತ್ರೆಗಳಲ್ಲಿ ಸಂಪೂರ್ಣ ಅಡುಗೆ ಮುಗಿಸುವ ಚಾಕಚಕ್ಯತೆ ಅವಳದ್ದಾದರೆ, ಕಾಫಿ ಮಾಡಲೂ ನಾಲ್ಕು ಪಾತ್ರೆ ಬಳಸುವ ನಿಪುಣ ಹುಂಬ ಅವನು. ಒಮ್ಮೆ ಮಾಡಿದ ಅಡುಗೆ ಮತ್ತೊಮ್ಮೆ ಮಾಡಲಾಗದಷ್ಟು ನೈಪುಣ್ಯ ಅವನಲ್ಲಿತ್ತು. ಇಲ್ಲಿ ಆದದ್ದೂ ಅದೇ. ಅಡುಗೆಕಟ್ಟೆ ಮೇಲೆ, ಅವನ ಫೋನಿನಲ್ಲಿ ನೀರ್ ದೋಸೆ ಮಾಡುವ ವಿಧಾನದ ಯೂಟ್ಯೂಬ್ ವಿಡಿಯೊ ಬಫರ್ ಆಗುತ್ತಿತ್ತು. ಅವನ ಎದುರು ಒಂದು ಪಾಕವಿಧಾನ ಪುಸ್ತಕ ತೆರೆದಿತ್ತು. ಗಂಟಿಕ್ಕಿದ ಮುಖಭಾವ, ಏಕಾಗ್ರತೆ, ತನ್ನ ಅಡುಗೆಯ ಕರಕುಶಲದಿಂದ ಅವಳನ್ನು ಮೆಚ್ಚಿಸುವ ದೃಢನಿಶ್ಚಯ ಎದ್ದು ಕಾಣುತ್ತಿತ್ತು.

ರಜೆ ದಿನ, ಅವಳ ನೆಚ್ಚಿನ ಬೆಳಗಿನ ತಿಂಡಿಗೆ ಸಕಲ ಸಾಮಾನು ಸರಂಜಾಮುಗಳೊಂದಿಗೆ ಸಜ್ಜಾಗಿದ್ದ ಈ ಸೈನಿಕ. ಅಡುಗೆ ಅವನಿಗೆ ಹೊಸದಲ್ಲ, ಆದರೆ ಅವಳಿಗೆ ಇಷ್ಟವಾಗುವಂತೆ ತಯಾರಿಸುವುದು ಅವನಿಗೆ ಯುದ್ಧದಷ್ಟೇ ಸಮಾನ. ಹೆಂಚಿಗೆ ಎಣ್ಣೆ ಸವರಿ ನೆನೆಯಲು ಬಿಟ್ಟು, ನೆಂದ ಅಕ್ಕಿಯ ಬಟ್ಟಲಿನಿಂದ ಅವಳ ಅದ್ದಿದ ಕೈ ತೆಗೆದು, ಹೆಗಲ ಮೇಲಿದ್ದ ಟವಲ್ ಅವಳಿಗೆ ಕೊಟ್ಟು ಕೈ ಒರೆಸಿಕೊಳ್ಳುವಂತೆ ಸಂಜ್ಞೆ ಮಾಡಿದ. ಅವಳನ್ನೊಮ್ಮೆ ನೋಡಿ ಗಾಳಿಯಲ್ಲಿ ಮತ್ತೊಂದು ಮುತ್ತನ್ನು ಅವಳೆಡೆಗೆ ತೂರಿ, ಮಿಕ್ಸಿ ಜಾರ್‌ಗೆ ಅಕ್ಕಿಯನ್ನು ಅಳೆದು ಸುರಿದ. ಅದರಲ್ಲಿ ಅರ್ಧದಷ್ಟು ನೆಲದ ಮೇಲೆ ಚೆಲ್ಲಿದ್ದ. ಇನ್ನೊಂದು ಅನಾಹುತಕ್ಕೆ ಇದು ನಾಂದಿಯೇನೋ ಎಂಬಂತೆ ಫೀಲ್ ಮಾಡುತ್ತಾ, ಪೆಚ್ಚು ನಗೆ ನಕ್ಕು ತಲೆ ಕೆರೆದು ಹಲ್ಕಿರಿದು ನಿಂತ ಅವನನ್ನು ನೋಡಿ ಚೆಲ್ಲಿದ ಅಕ್ಕಿಗೆ ಸಿಟ್ಟಾಗಬೇಕೋ, ಅವನ ಪೀಕಲಾಟಕ್ಕೆ ನಗಬೇಕೋ ತಿಳಿಯದೆ ಅವನನ್ನೇ ದಿಟ್ಟಿಸುತ್ತಾ ಕುಳಿತಿದ್ದಳು.

‘ರುಬ್ಬು ಅಂದ್ರೆ ರಂಗೋಲೆ ಬಿಡ್ತಿದೀಯಾ?’ ಎಂದವಳೆ, ನಗು ತಡೆಯಲಾಗದೆ ಜೋರಾಗಿ ನಕ್ಕುಬಿಟ್ಟಳು. ಛಲ ಬಿಡದ ತ್ರಿವಿಕ್ರಮನಂತೆ, ಚೆಲ್ಲಿದ್ದ ಅಕ್ಕಿಕಾಳುಗಳನ್ನು ಹೆಕ್ಕಿ, ತೊಳೆದು, ಪುನಃ ಜಾರ್‌ಗೆ ತುಂಬಿ ರುಬ್ಬಲು ಸಜ್ಜಾದ. ಮುಚ್ಚಳ ಮುಚ್ಚಿ ಮಿಕ್ಸಿ ಸ್ವಿಚ್ಚನ್ನು ತಿರುಗಿಸಿದ.

ಟಿಕ್ ಟಿಕ್ ಟಿಕ್...

ಸದ್ದಿಲ್ಲದೇ ಶಿಡ್ಲಘಟ್ಟದ ವಿಗ್ರಹದ ಹಾಗೆ ಕುಳಿತಿದ್ದ ಮಿಕ್ಸಿ ಈಗ ಅವನನ್ನು ನೋಡಿ ಅಣಕಿಸಿದಂತೆ ಭಾಸವಾಗುತ್ತಿತ್ತು ಅವನಿಗೆ. ಮುಚ್ಚಳ ತೆಗೆದು ಬಗ್ಗಿ ನೋಡಿದ, ಏನೂ ಪ್ರಯೋಜನವಾಗಲಿಲ್ಲ. ಗಣೇಶನ ಮದುವೆಗೆ ನೂರೆಂಟು ವಿಘ್ನ ಎಂಬಂತೆ, ಇವನ ಶೌರ್ಯ ಪ್ರದರ್ಶನಕ್ಕೆ ಬೆಸ್ಕಾಂ ತನ್ನ ಅಸಮ್ಮತಿ ಸೂಚಿಸಿತ್ತು. ಅದ್ಯಾವ ಮಾಯದಲ್ಲೋ ಕರೆಂಟ್ ಹೋಗಿತ್ತು.

ಮೀಟರ್ ಬೋರ್ಡ್ ಮೇಲೆ ಬತ್ತಿಹೋಗಿದ್ದ ಕೆಂಪು ಲೈಟ್ ತೋರಿಸುತ್ತ ಗೊಳ್ಳೆಂದು ನಕ್ಕ ಅವಳು, ಅವನು ಬೇಸರಿಸಿಕೊಂಡಾನು ಎಂದು ತನ್ನ ಬಾಯಿಗೆ ಕೈ ಅಡ್ಡ ಹಿಡಿದು ಅವನೇ ಕೊಟ್ಟ ಟವಲ್ ಒಳಗೆ ಮುಸಿ ಮುಸಿ ನಗುತ್ತಿದ್ದಳು. ಬೆಸ್ಕಾಂ ಮೇಲೆ ಅಸಾಧ್ಯ ಅಸಮಾಧಾನ, ಅದರ ಜೊತೆ ಅವಳ ಮುಗ್ಧ ಗೇಲಿ, ಚಕ್ರವ್ಯೂಹದೊಳಗೆ ನುಗ್ಗಿ ಹೊರಬರಲಾಗದ ಅಭಿಮನ್ಯುವಿನಂಥ ಪರಿಸ್ಥಿತಿಯಲ್ಲಿ ಸಿಲುಕಿ ಚಡಪಡಿಸುತ್ತಿದ್ದ. ಹುಸಿಮುನಿಸು ಪ್ರದರ್ಶಿಸುತ್ತಾ, ಅವಳ ಕೈಯಿಂದ ಟವಲ್ ಕಸಿದುಕೊಂಡು ತನ್ನ ಹೆಗಲ ಮೇಲಕ್ಕೆ ಎಸೆದುಕೊಂಡು ಮೂತಿ ಸೊಟ್ಟ ಮಾಡಿದ.

ಅವಳನ್ನೇ ನೋಡುತ್ತಾ ಕೆಳಗೆ ಈಳಿಗೆ ಮಣೆ ಮೇಲೆ ಕೂತು ಕಾಯಿ ತುರಿಯಲು ಶುರು ಮಾಡಿದ. ನೀರ್ ದೋಸೆಗೆ ಕಾಯಿ ಚಟ್ನಿ ಮತ್ತು ತುರಿದ ಕಾಯಿಬೆಲ್ಲದ ಹೂರಣ ಮಿಶ್ರಣ ಅವಳ ಫೆವರೇಟ್ ಕಾಂಬಿನೇಶನ್ ಎಂದು ಅವನಿಗೆ ಚೆನ್ನಾಗಿ ತಿಳಿದಿತ್ತು. ಇವುಗಳ ತಯಾರಿಯಲ್ಲಿದ್ದ ಅವನ ಮುದ್ದು ಪೀಕಲಾಟ ಅವಳಿಗೆ ಗಮ್ಮತ್ತು ತರಿಸಿತ್ತು. ಸಣ್ಣ ಮಗುವಿಗೆ ಕಚಗುಳಿಯಿಟ್ಟಂತೆ ಹೊಟ್ಟೆ ಹಿಡಿದು ನಗುತ್ತಿದ್ದಳು. ಅದೇ ಹುಸಿಮುನಿಸನ್ನು ಮುಂದುವರಿಸುತ್ತಾ ಎದ್ದು ಒಲೆ ಮೇಲೆ ಹೆಂಚನ್ನಿಟ್ಟು ಮತ್ತೊಮ್ಮೆ ಎಣ್ಣೆ ಸವರಿದ. ಮತ್ತೆ ಕಾಯಿ ತುರಿಯಲು ಬಗ್ಗಿದವನ ಮೊಣಕೈ ಎಣ್ಣೆ ಡಬ್ಬಕ್ಕೆ ತಗುಲಿ ಹಾರಿದ ಎಣ್ಣೆ, ತಾನುಟ್ಟ ಪಂಚೆಯ ಮೇಲೆ ವಿಶ್ವ ನಕ್ಷೆ ಮೂಡಿಸಿತ್ತು. ಇನ್ನೂ ಒಳಗೊಳಗೇ ನಗುತ್ತಿದ್ದ ಅವಳಿಗೆ, ಈ ಅಚಾತುರ್ಯ ಘಟಿಸಿದ ಕೂಡಲೇ, ಉಕ್ಕಿ ಬಂದ ನಗು ಕೇಕೆಗೆ ತಿರುಗಿತ್ತು, ಅವಳ ಕಣ್ಣಿಂದ ನೀರು ಬರಿಸಿತ್ತು. ಅವನು ಅವಳನ್ನೇ ದಿಟ್ಟಿಸಿ ನೋಡುತ್ತಿದ್ದ. ಅವರಿಬ್ಬರ ನೋಟ ಒಂದಾದ ಕೂಡಲೇ ಅವಳ ನಗು ಮತ್ತಷ್ಟು ಜೋರಾಯ್ತು. ಅವಳನ್ನೊಮ್ಮೆ, ಮಕ್ಕಾಡೆ ಬಿದ್ದ ಎಣ್ಣೆ ಡಬ್ಬವನ್ನೊಮ್ಮೆ, ತನ್ನ ಪಂಚೆಯನ್ನೊಮ್ಮೆ ನೋಡಿಕೊಳ್ಳುತ್ತಾ ಹತಾಶೆಯಿಂದ ನಿಂತ. ಮೀಸೆಯ ಮರೆಯಲ್ಲಿ ಅವನ ತುಟಿಗಳು ಅವನಿಗೇ ಅರಿವಿಲ್ಲದಂತೆ ಮೆಲ್ಲನೆ ಬಿರಿದಿದ್ದವು.

ಅರ್ಧ ನಗು ಅರ್ಧ ಮಾತುಗಳ ನಡುವೆ ಅವಳು ‘ಆಗ್ಲೇ ರಂಗೋಲಿ ಇಟ್ಟೆ, ಈಗ ಎಣ್ಣೆ ಬಿಟ್ಟೆ... ನೆಲದ ಮೇಲೆ ದೋಸೆ ಮಾಡೋ ಅಷ್ಟು ನೆಲ ಕಾದಿಲ್ಲ ಚಿನ್ನ, ಹೆಂಚಿನ ಮೇಲೆ ಮಾಡ್ಬೇಕು...’ ಎನ್ನುತ್ತಿದ್ದ ಹಾಗೆ ಅವಳ ನಗು ಮತ್ತು ಕಣ್ಣೀರು ದ್ವಿಗುಣಗೊಂಡಿತು. ಅವನು ಮತ್ತೊಮ್ಮೆ ಮೂತಿ ಸೊಟ್ಟ ಮಾಡಿ ಅದೇ ಎಣ್ಣೆ ಪಂಚೆಯನ್ನು ಎತ್ತಿ ಕಟ್ಟಿ ಅಳಿದುಳಿದಿದ್ದ ಎಣ್ಣೆ ಡಬ್ಬಿ ಎತ್ತಿಕೊಂಡು ಬಹಳ ಜೋಪಾನವಾಗಿ ಅದನ್ನು ಕಟ್ಟೆಯ ಮೇಲಿಟ್ಟ. ಈಗ ಬಹಳ ಜಾಗ್ರತೆಯಿಂದ ಪುನಃ ಸಾವಕಾಶವಾಗಿ ಕುಳಿತ. ಅವಳ ನಗು ಮತ್ತಷ್ಟು ಹೆಚ್ಚಾಯಿತು.

ತೊಡೆಗಳಿಗೆ ಅಂಟುತ್ತಿದ್ದ ಪಂಚೆ ನೋಡಿಕೊಂಡು ಪೇಚಾಡುತ್ತಾ ಕಾಲು ಅಗಲಿಸಿಕೊಂಡು ಅತ್ತಿತ್ತ ಅವನು ಓಡಾಡುತ್ತಿದ್ದ ಪರಿಗೆ ಅವಳ ನಗು ತಾರಕಕ್ಕೇರಿತ್ತು. ಏನೋ ಮಾಡಲು ಹೋಗಿ ಮತ್ತೇನೋ ಮಾಡಿ ನಗೆಪಾಟಲಾಗಿದ್ದರೂ, ಅವಳ ನಗುವಿನ ಕಿಲಕಿಲ ಅವನ ಮನಸ್ಸಿಗೆ ಮುದ ನೀಡುತ್ತಿತ್ತು. ಆದರೆ ಅವಳ ಹಸಿದ ಹೊಟ್ಟೆಗೆ ಏನಾದರೂ ಉಪಶಮನ ಬೇಗನೆ ಮಾಡಬೇಕೆಂದು ಪಣತೊಟ್ಟು ಇನ್ನೊಂದು ಪಾತ್ರೆಯಲ್ಲಿದ್ದ ತೆಂಗಿನಕಾಯಿ ತುರಿ ತಂದು ಅದೇ ಮಿಕ್ಸಿ ಜಾರ್‌ಗೆ ಸೇರಿಸಿದ.

ಒಂದು ಹಿಡಿ ತುರಿ ಜಾರಿನೊಳಗೆ ಸೇರುತ್ತಿದ್ದಂತೆ, ಥಟ್ಟನೆ ಬಂದಿತ್ತು ಕರೆಂಟು, ರಿವ್ವನೆ ತಿರುಗಿತ್ತು ಮಿಕ್ಸಿ, ಮುಚ್ಚಳ ಹಾಕದ ಜಾರಿನೊಳಗೆ ಇದ್ದ ಅಕ್ಕಿ ಮತ್ತು ಕಾಯಿ ತುರಿ ಎರಚಾಡಿ ಅವನಿಗೆ ತುರಿ ನುಚ್ಚಿನಾಭಿಷೇಕ ನಡೆಸಿತ್ತು.

ಹಕ್ಕಿ ಹಿಕ್ಕೆಯಿಂದ ಅಲಂಕರಿಸಲ್ಪಟ್ಟ ಪ್ರತಿಮೆಯಂತೆ ನಿಂತಿದ್ದ ಅವನನ್ನು ನೋಡಿ ಅವಳ ನಗು ಮಿತಿಮೀರಿ ಬಿಕ್ಕಳಿಕೆಗೆ ತಿರುಗಿತ್ತು. ಜೋರಾಗಿ ನಗುತ್ತಲೇ, ಅಡುಗೆ ಕಟ್ಟೆಯಿಂದ ಛಂಗನೆ ಒಂದೇ ನೆಗೆತಕ್ಕೆ ಹಾರಿ ನಿಂತವಳು, ಅವನ ಹೆಗಲಿಗೆ ತನ್ನ ತೋಳುಗಳ ಹಾರ ಹಾಕಿ, ‘ಚಿನ್ನ, ನಿನ್ನ ಅಡುಗೆ ಸಾಹಸ ಸಾಕು, ಮಿಕ್ಕಿದ್ದು ನಾನು ನೋಡಿಕೊಳ್ತೀನಿ, ಈ ನಿನ್ನ ಅಡುಗೆ ಕಾರ್ಯಕ್ರಮ ನಂಗೆ ಒಂದು ಒಳ್ಳೆ ಕಾಮಿಡಿ ಶೋ ನೋಡಿದ ಹಂಗೆ ಆಗಿದೆ’ ಎಂದು ಹೇಳಿ ಅವನ ಮೈಮೇಲೆ ಎರಚಿದ್ದ ಕಾಳುಗಳನ್ನು ಒದರುತ್ತಾ ನಿಂತಳು. ಅವಳನ್ನು ಬರಸೆಳೆದು ಗಟ್ಟಿಯಾಗಿ ಅಪ್ಪಿಕೊಂಡು ‘ಹೌದ್ ಹೌದು, ಕಾಮಿಡಿನೇ ಆಯಿತು ಈ ಎಪಿಸೋಡು. ನೀನೇನೂ ಅಡುಗೆ ಮಾಡೋದು ಬೇಡ ಬಾ ಚಿನ್ನ, ಸ್ವಿಗ್ಗಿ ಆರ್ಡರ್ ಮಾಡ್ತೀನಿ. ಅಡುಗೆ ಮಾಡೋದೂ ಒಂದು ಎಂಟರ್ಟೈನ್ಮೆಂಟು ಅಂತ ನಂಗೆ ಇಷ್ಟು ದಿನ ಗೊತ್ತಿರ್ಲಿಲ್ಲ! ಯಾವುದಾದ್ರು ಫೇಮಸ್ ಕುಕರಿ ಶೋನಲ್ಲಿ ಅಡುಗೆ ಮಾಡೋಕ್ಕೆ ಹೋಗೋಣ ಅನ್ಕೋತಿದೀನಿ! ಅಥವಾ ಯಾವ್ದಾದ್ರೂ ಸ್ಟ್ಯಾಂಡ್ ಅಪ್ ಕಾಮಿಡಿ ಶೋಗೆ ಹೋಗ್ಲಾ...?’ ಎಂದ ಕಣ್ಣುಗಳನ್ನು ಪಿಳಿಪಿಳಿ ಆಡಿಸುತ್ತಾ.

‘ಅವ್ವೆವ್ವೆವ್ವೇ...’ ಎಂದು ಅವಳು ಕೂಡ ಅವನ ಸ್ವರದಲ್ಲೇ ಕೀಟಲೆಯ ಉತ್ತರವಿತ್ತಳು. ಗೊಳ್ಳೆಂದು ನಕ್ಕ ಇಬ್ಬರೂ ಕ್ಲೀನಿಂಗ್ ಕಾರ್ಯಕ್ರಮ ಶುರು ಮಾಡಿಕೊಂಡರು. ಅವನ ಪಾಕಪ್ರಯೋಗದಿಂದ ಮಾಡರ್ನ್ ಆರ್ಟ್ ಗ್ಯಾಲರಿಯಂತಾಗಿದ್ದ ಅಡುಗೆ ಮನೆಯನ್ನು ಅವರಿಬ್ಬರೂ ಒಟ್ಟಿಗೆ ಸ್ವಚ್ಛಗೊಳಿಸಿದರು. ಈ ಅನಿರೀಕ್ಷಿತ ಘಟನೆಯು ಜೀವನಪರ್ಯಂತ ಉಳಿಯುವ ಅಮೂಲ್ಯವಾದ ನೆನಪಾಯಿತು.

ಪ್ರತಿಕ್ರಿಯಿಸಿ: feedback@sudha.co.in